ಓಡಾಟಗಳಿಂದ ಅದೆಷ್ಟು ಜನರಿಗೆ ಕಿರಿಕಿರಿಯಾಗಿ ರಸಭಂಗವಾಗಿ ನಮ್ಮನೆಷ್ಟು ಬೈದುಕೊಂಡರೋ ದೇವರೇ ಬಲ್ಲ. ನಮ್ಮ ಮುಂದಿನ ಚಿಕ್ಕವಯಸ್ಸಿನ ದಂಪತಿಗಳು ಒಮ್ಮೆ ಹಿಂತಿರುಗಿ ಕೆಂಜುವವರಂತೆ ನನ್ನತ್ತ ನೋಡಿ 'ಪ್ಲೀಸ್, ಈ ಹಾಡು ಆಗೋವರ್ಗು ಹುಡುಕೋದನ್ನ ನಿಲ್ಲಿಸಿ, ಆಮೇಲೆ ಹುಡ್ಕೊಳಿ. ಇಲ್ಲ ಇಂಟರ್‌ವೆಲ್‌ನಲ್ಲಿ ನಾನು ಹೆಲ್ಪ್ ಮಾಡ್ತೀನಿ. ಅದೆಂಥ ಓಲೆಯಂತ ಹೇಳಿ' ಅಂದಿದ್ದರು. ನಾನಂತೂ ಅವರ ಯಾವ ಮಾತುಗಳಿಗೆ ಕೇರ್ ಮಾಡದೆ ನನ್ನ ಹುಡುಕಾಟ ಮುಂದುವರೆಸಿದೆ. ಇದರ ಮಧ್ಯೆ ಜಯಶ್ರೀಯ ಅಳು ಅವ್ಯಾಹತವಾಗಿತ್ತು.

ಸುಮಾರು ಅರ್ಧಗಂಟೆ ನಾವು ಹಾಗೇ ಹುಡುಕಿರಬಹುದು. ಅಕ್ಕಪಕ್ಕದವರು 'ಏನಾದ್ರೂ ಮಾಡ್ಕೊಂಡು ಸಾಯಿರಿ. ನಾವಂತು ಸಿನಿಮಾ ನೋಡ್ತೀವಿ' ಅನ್ನುವವರಂತೆ ನೋಡಹತ್ತಿದ್ದರು. ಹುಡುಕಿ ಹುಡುಕಿ ಸುಸ್ತಾಗಿ ಹೋದ ಮೇಲೆ ಮಾಮಿ 'ಹೋಗ್ಲಿ ಬಿಡು ಜಯಶ್ರೀ, ಅಂಥದ್ದೇ ಇನ್ನೊಂದು ಜೊತೆ ಓಲೇನ ಮಾಮಂಗೆ ಹೇಳಿ ತೆಗೆಸಿಕೊಡ್ತೀನಿ. ಅಮ್ಮ ಬೈಯ್ತಾರೆ ಅಂತ ಹೆದರಿಕೊಳ್ಳಬೇಡ' ಎಂದು ಅನುನಯಿಸಿದರು. ನಾನು ಅವಳ ಭುಜ ಹಿಡಿದು 'ಯಾವ ಓಲೆ ಹೇಳು, ನೀನ್ ಯಾವಾಗಲೂ ಹಾಕಿಕೊಳ್ಳುತ್ತಿದ್ಯಲ್ಲ ಕೆಂಪು ಹರಳಿನ ಸ್ಟಾರು... ಅದಾ' ಎಂದೆ.

'ಇಲ್ಲಾ ಉಷಾಕ್ಕ, ಇವತ್ತು ಎಣ್ಣೆ ನೀರಿಗಂತ ಸ್ಟಾರ್ ಬಿಚ್ಚಿಟ್ಟಿದ್ದೆ. ಕಿವಿ ತೂತು ಮುಚ್ಚಿ ಹೋಗುತ್ತೆ ಅಂತ ಅಮ್ಮ ಕಡ್ಡಿ ಇಟ್ಟಿದ್ರು, ಎರಡೂ ಬಿದ್ದೋಗಿದೆ. ಬೀಳಿಸ್ಕೋಬೇಡ ತೂತು ಮುಚ್ಕೊಗುತ್ತೆ ಅಂದಿದ್ರು. ಈಗ ಕಿವಿ ತೂತು ಮುಚ್ಚೇ ಹೋಗಿರ್‌ಬೇಕು' ಅಂತ ಗದ್ಗದಳಾಗಿ ಅತ್ತಳು.

ಗಕ್ಕನೆ ಗರಬಡಿದಂತಾಗಿ ಮಾಮಿ ನನ್ನ ಮುಖ ನೋಡಿದರು. ನಮ್ಮಿಬ್ಬರ ಮುಖದ ಪೆದ್ದುತನ ಯಾರಿಗೂ ಕಾಣದಂತೆ ಮುಖವನ್ನು ತಗ್ಗಿಸಿ ಕುರ್ಚಿಯಲ್ಲಿ ಹುದುಗಿಕೊಂಡೆವು. ಇಂಥ ಮಹಾ ಬೇಸ್ತು ಎಂದೂ ಬಿದ್ದಿರಲಿಲ್ಲ. ಸಿನಿಮಾ ಬಿಟ್ಟೊಡನೆ ಯಾರಿಗೂ ಮುಖ ತೋರಿಸಬಾರದೆಂದು ಆಟೊ ಸ್ಟ್ಯಾಂಡಿಗೆ ಓಡಿದೆವು ಹಾಗೂ ಹಿಂದಿನ ಬೆಂಚಿನಲ್ಲಿ ಕೂತಿದ್ದವರು ಎದುರಾಗಿ 'ಸಿಕ್ತೇನ್ರಿ ಕಿವೀದು' ಎಂದರು. ಹೂಂ ಅಂದೆ ಚುಟುಕಾಗಿ. 'ಅದೆಂಥದ್ದು ತೋರಿಸಿ' ಅಂದರು. 'ಅಯ್ಯೋ ಬಿಡಿ, ನೀಲಿ ಕಲ್ಲಿನ ಓಲೆ, ಲೋಲಾಕು' ಎಂದು ಆಟೊ ಸ್ಟ್ಯಾಂಡಿಗೆ ದೌಡಾಯಿಸಿದೆ.



ಇಂತದ್ದೆ ಇನ್ನೊಂದು ಪ್ರಸಂಗ... ಬಹು ಹಿಂದಿನ ಮಾತು. ನನ್ನ ತಂದೆಯವರು ಹಾಸನದ ಎಂ.ಎಸ್.ಇ.ಬಿ.ಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾಲ. ನಾವೆಲ್ಲ ಹಾಸನದ ಸಂತೇ ಮಾಳದೆದುರಿನ ಹಳೇ ಕಾಲೊನಿಯಲ್ಲಿ ವಾಸವಿದ್ದೆವು. 1973ನೇ ಇಸವಿ ಎಂಬ ನೆನಪು. ಆಗೆಲ್ಲ ಸೊಸೈಟಿಯಲ್ಲಿ ರೇಷನ್ ಕಾರ್ಡಿನಲ್ಲಿ ತರುವ ಅಕ್ಕಿ, ಗೋಧಿ, ಸಕ್ಕರೆ, ಬೇಳೆ ಎಣ್ಣೆಗಳು ಬಹು ಅಮೂಲ್ಯವಾದ ಸಂಪತ್ತಿನಂತೆ. ತಿಂಗಳಿಗೊಮ್ಮೆ ವಿದ್ಯುತ್ ಮಂಡಳಿಯ ಎಲ್ಲ ಕೆಲಸಗಾರರಿಗೂ ರೇಷನ್ ವಿತರಣೆಯಾಗುತ್ತಿತ್ತು. ಮಾರುಕಟ್ಟೆ ದರಕ್ಕಿಂತ ಕಡಿಮೆ ದರದಲ್ಲಿ ಸಾಧಾರಣವಾಗಿ ಸೊಸೈಟಿಗೆ ರೇಷನ್ ಬರುತ್ತಿದ್ದುದು ಮಾಸಾಂತ್ಯದಲ್ಲಿ ಸಂಬಳವು ತಿಂಗಳ ಕಡೆಯ ದಿನವೆ. ಒಂದು ಮಾಸಾಂತ್ಯ ಹಗಲು. ನನ್ನ ತಂದೆ ಆಫೀಸಿಗೆ ಹೋಗಿದ್ದರು. ಅಮ್ಮ ಅಡುಗೆ ಮನೆಯಲ್ಲಿದ್ದರು. ಹನ್ನೊಂದು ಗಂಟೆಯ ಸಮಯ, ಮನೆಯ ಗೇಟ್ ತೆರೆದು ತುಸು ತಲೆ ನೆರೆತಿದ್ದ ಹಿರಿಯ ವಯಸ್ಸಿನ ವ್ಯಕ್ತಿಯೊಬ್ಬರು ನೇರ ಬಾಗಿಲ ಬಳಿ ಬಂದರು. ಜ್ವರದ ಕಾರಣ ಮನೆಯಲ್ಲಿದ್ದ ನಾನು ವರಾಂಡದ ಜಾಲರಿಯಿಂದ ಅವರನ್ನು ನೋಡಿದೆ.

'ಯಾರು ಬೇಕಿತ್ತು?' ಎಂದು ಕೇಳಿದೆ. 'ಅಮ್ಮೌರು ಇಲ್ವ' ಅಂತ ಕೇಳಿದರು. 'ಇದ್ದಾರೆ' ಅಂದೆ. ಆಗೀಗ ಆಫೀಸಿನ ಕೆಲಸಗಾರರು ಕಾರ್ಯನಿಮಿತ್ತ ನಮ್ಮ ಮನೆಗೆ ಬರುವುದಿತ್ತು. ಹಾಗೆ ಒಬ್ಬರು ಅಂದುಕೊಂಡೆ. 'ಕರೀರಿ ಅವರನ್ನ' ಅಂತ ನಕ್ಕರು. ನಾನು 'ಅಮ್ಮ ಯಾರೋ ಬಂದಿದ್ದಾರೆ' ಎಂದೆ. ಅಮ್ಮ ಹೊರಬಂದು 'ಏನಪ್ಪ?' ಅಂದರು.

'ತಾಯಿ, ಸಂಪತ್ ಸಾಹೇಬರು ಕಳಿಸಿದ್ರು' ಅಂದರು. 'ಹೊಸಬನೇನಪ್ಪ? ಯಾವತ್ತು ನೋಡಿಲ್ಲವಲ್ಲ... ಸರಿ, ಏನಂತೆ?' ಎಂದು ಕೇಳಿದರು. 'ಹೂಂ ಅಮ್ಮೌರೆ, ಬಂದು ಒಂದುವಾರ ಆಯಿತು. ನಿಮ್ಮನೇಗೆ ಬಂದಿರ್ಲಿಲ್ಲ ಅಷ್ಟೆ. ಸೊಸೈಟಿಗೆ ರೇಷನ್ ಬಂದಿದೆ, ಮನೆಗೋಗಿ ಬ್ಯಾಗು, ದುಡ್ಡು, ರೇಷನ್ ಕಾರ್ಡ್ ತಗೊಂಬಾ ಅಂದ್ರು ಸಾಹೇಬ್ರು' ಅಂದ. ಮನೆಗೆ ಯಾವಾಗಲು ರೇಷನ್ ತರ್ತಾ ಇದ್ದದ್ದು ತಂದೆಯವರೆ. ಅಮ್ಮ 'ಸರಿ, ತಡಿಯಪ್ಪ ತಂದ್ಕೊಡ್ತೀನಿ' ಅಂತ ರೇಷನ್ನೆಂದು ಹೊಲೆಸಿಟ್ಟುಕೊಂಡ ಗಟ್ಟಿಮುಟ್ಟಾದ ಖಾಕಿ ಬ್ಯಾಗುಗಳು, ರೇಷನ್ ಕಾರ್ಡ್ ಮತ್ತು ದುಡ್ಡು ತಂದುಕೊಟ್ಟರು. 'ತಾಯಿ ಎಷ್ಟು ಕೊಟ್ಟಿದ್ದೀರಿ' ಅಂತ ಕೇಳಿದ. ಅದೆಷ್ಟೋ ದುಡ್ಡು ಅಮ್ಮ ಹೇಳಿದರು. 'ಅಮ್ಮೌರೆ, ಈ ಸರ್ತಿ ಎಣ್ಣೆನೂ ಬಂದಿದೆಯಂತೆ. ಅದಕ್ಕೆ ಹೆಚ್ಚಿಗೆ ದುಡ್ಡು ಇಸ್ಕೊಂಬಾ ಅಂದ್ರೌರೆ' ಎಂದ. ಅಮ್ಮ ತಮ್ಮಮ್ಮ ಮದುವೆಯಲ್ಲಿ ಕೊಟ್ಟಿದ್ದ ಗಟ್ಟಿಗಡತವಾದ ಹಿತ್ತಾಳೆ ಮಲ್ಲಿತೂಕನ್ನು, ಕೆಲವು ನೋಟುಗಳನ್ನು ತಂದುಕೊಟ್ಟರು. ತೆಗೆದುಕೊಂಡು ಹೊರಟ.

ಮಧ್ಯಾಹ್ನ ಎರಡು ಗಂಟೆಗೆ ಅಪ್ಪ ಊಟಕ್ಕೆಂದು ಬಂದಾಗ ಅಮ್ಮ 'ಎಲ್ಲಿ ರೇಷನ್ನು?' ಅಂತ ಕೇಳಿದಾಗ 'ಯಾವ ರೇಷನ್ನು? ಈ ಸರ್ತಿ ಇನ್ನೂ ಬಂದಿಲ್ಲ' ಅಂದಾಗ, ಕಳವಳದ ಮುಖದಿಂದ 'ಅಯ್ಯೋ ನೀವ್ ಯಾರ್ನೋ ಕಳಿಸಿದ್ರಿ... ರೇಷನ್ ಕಾರ್ಡು ದುಡ್ಡು ತಗೊಂಬಾ ಅಂತ... ನಾನು ಬ್ಯಾಗು, ದುಡ್ಡು, ಕಾರ್ಡು, ತೂಕು ಕೊಟ್ಟು ಕಳುಹಿಸಿದೆ' ಅಂದರು. ಅಪ್ಪ ಗಾಬರಿಯಿಂದ 'ಅಯ್ಯೋ ದೇವರೆ! ನಾನ್ಯಾರನ್ನು ಕಳಿಸೇ ಇಲ್ಲ. ಯಾರೋ ಬಂದು ದುಡ್ಡು ಕೇಳಿದ್ರೆ ಕೊಟ್ಟು ಬಿಡೋದಾ! ಒಂದು ಫೋನ್ ಮಾಡಿ ವಿಚಾರಿಸಬೇಡವ?' ಅಂತ ಬೈದರು. ಹಿಂಗು ತಿಂದ ಮಂಗನಂತೆ ಮುಖವಾದ ಅಮ್ಮ ಮಂಕಾಗಿ ಬಿಟ್ಟರು. ಎಂ.ಎಸ್.ಸಿ.ಬಿ. ಕನೆಕ್ಷನ್‌ಗಳಿಗೆ ಮಾತ್ರ ಬಳಕೆಯಾಗುತ್ತಿದ್ದ ಫೋನಾದರು ಮಾಡಬಹುದಿತ್ತು ಅಂತ ಹಳಹಳಿಸಿದರು. ದಿನನಿತ್ಯದ ಜಂಜಾಟದಲ್ಲಿ ಆ ಘಟನೆ ಮರೆತೆ ಹೋಯಿತು.

ಇಂಥದ್ದೇ ಮತ್ತೊಂದು ಪ್ರಸಂಗವೂ ಇದೆ. ಆ ಕಾಲಕ್ಕೆ ನಮ್ಮ ಮನೆಯಲ್ಲಿ ಕಬ್ಬಿಣದ ಕಂಬಿಗಳಿಂದ ಮಾಡಿದ ಕುರ್ಚಿಗಳಿದ್ದವು. ಚಪ್ಪಟೆ ಪ್ಲಾಸ್ಟಿಕ್ ಬಣ್ಣ ಬಣ್ಣದ ಕೇನ್ ವೈರ್‌ಗಳಿಂದ ಅದನ್ನು ಹೆಣೆಯುತ್ತಿದ್ದರು. ಐದಾರು ವರ್ಷಗಳಿಗೊಮ್ಮೆ ಕುರ್ಚಿಯ ವೈರ್ ಬದಲಿಸಬೇಕಿತ್ತು. ಎಷ್ಟೆಷ್ಟೋ ವರ್ಗಾವಣೆ, ಸ್ಥಳ ಪಲ್ಲಟಗಳಲ್ಲೂ ಅಮ್ಮ ಕುರ್ಚಿಗಳನ್ನು ಜೋಪಾನವಾಗಿಟ್ಟುಕೊಂಡಿದ್ದರು. ಒಂದು ದಿನ ಮನೆಯಲ್ಲಿ ಯಾರೂ ಇಲ್ಲದ ಹೊತ್ತು. ಅಮ್ಮ ಗೃಹ ಕೃತ್ಯದಲ್ಲಿದ್ದರು. ಹನ್ನೊಂದು ಗಂಟೆಯ ಸಮಯ ಆಗಂತುಕನೊಬ್ಬ ಮನೆಯ ಕರೆಗಂಟೆ ಒತ್ತಿದ. ಬಾಗಿಲು ತೆರೆದರೆ ಒಂದೆರೆಡು ಕೇನ್ ವೈರ್‌ಗಳ ಸುರುಳಿಯನ್ನು ಎಡ ಹೆಗಲಿಗೆ ನೇತು ಹಾಕಿಕೊಂಡು ನಿಂತಿದ್ದ. ಬಲ ಹೆಗಲಿಗೆ ಒಂದು ಚೀಲ ಬಾಗಿಲು ತೆರೆದೊಡನೆ ಕಣ್ಣಿಗೆ ಬೀಳುತ್ತಿದ್ದ ಕಬ್ಬಿಣದ ಕುರ್ಚಿಗಳನ್ನು ನೋಡಿ 'ಇದೆಲ್ಲ ಹೋಗ್‌ಬಿಟ್ಟಿದೆಯಲ್ಲ ತಾಯಿ... ಹೊಸದು ಹಾಕಿಸಬೇಡವ' ಎಂದ. ಅಮ್ಮ ಅನುಮಾನದಿಂದ 'ಹೌದು ಇನ್ನು ಸ್ವಲ್ಪದಿನ ಹೋಗಲಿ, ಆಮೇಲೆ ಹಾಕಿಸ್ತೀನಿ' ಅಂದರು. 'ಯಾಕೆ ಕಷ್ಟಪಡ್ತೀರಮ್ಮ? ಇದನ್ನೆಲ್ಲ ತಳ್ಳೋಗಾಡೀಲಿ ಹಾಕ್ಕೊಂಡು ಅವನತ್ರ ಪಂಚಾಯ್ತಿ ಮಾಡಿ... ನನ್ನ ಹತ್ರ ಅದೆಲ್ಲ ಏನಿಲ್ಲ. ಈಗ ನೋಡ್ಕೊಂಡು ಹೋಗಿ ವೈರ್ ತರ್ತೀನಿ. ಇವತ್ತು ಈ ಎರಡು ಕುರ್ಚಿ ಮುಗಿಸ್ತೀನಿ. ನಾಳೆ ಇನ್ನೆರಡು ಕುರ್ಚಿ, ಟೀಪಾಯಿ ಆಗೋಗುತ್ತೆ. ಇಲ್ಲೇ ನಿಮ್ ಕಣ್ಮುಂದೇನೆ ಮಾಡಿಕೊಂಡ್ತಿನಿ. ನೀವು ಕಲರ್ ಸೆಲೆಕ್ಟ್ ಮಾಡಿ ಸಾಕು' ಅಂದ. ಅಮ್ಮನಿಗೂ ಹೌದೆನ್ನಿಸಿತು. ಇದನ್ನೆಲ್ಲ ಹೊರೆಸಿಕೊಂಡು ಆಟೋಲಿ ಹೋಗಿ, ಅವನ ಹತ್ತಿರ ಬೆಲೆಗೆ ಗುಂಜಾಡಿ... ಅದರ ಬದಲು ಇಲ್ಲೇ ಮನೆ ಬಾಗಿಲಲ್ಲಿ ಕೆಲಸವಾಗುತ್ತೆಂದು ಖುಷಿಯಾಯಿತು. 'ಸರಿ ಹೇಳಪ್ಪ, ಏನ್ ಕೊಡಬೇಕು' ಎಂದು ವ್ಯಾಪಾರ ಶುರು ಮಾಡಿದರು.

'ಒಂದೊಂದು ಕುರ್ಚಿಗೆ ಇನ್ನೂರು ಕೊಡಿ ತಾಯಿ. ಟೀಪಾಯಿಗೆ ಮುನ್ನೂರು. ಇನ್ನೂರರಲ್ಲಿ ನೂರೈವತ್ತು ವೈರಿಗೆ ಹೋಗುತ್ತೆ. ನಂಜೊತೆ